ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸುವುದಕ್ಕೆ ಸಂಬಂಧಿಸಿದ ನಿಯಮಗಳು

೯೯೭ (೨೭೪೭) (೧) ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಬೇಲೂರು) (೨) ಶ್ರೀ ಹೆಚ್.ಸಿ. ಮಹದೇವಪ್ಪ (ಟಿ. ನರಸೀಪುರ) (೩) ಶ್ರೀ ಬಿ.ಬಿ. ನಿಂಗಯ್ಯ (ಮೂಡಿಗೆರೆ).—ಮಾನ್ಯ ಕಂದಾಯ, ಯೋಜನೆ, ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಡಿಸೆಂಬರ್ ೧೯೮೭ ರವರೆಗೆ ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ಜನರ ಸಂಖ್ಯೆ ಎಷ್ಟು ? ಮತ್ತು ಒತ್ತುವರಿ ಸಾಗುವಳಿಯಾಗಿರುವ ಒಟ್ಟು ಭೂ ವಿಸ್ತೀರ್ಣವೆಷ್ಟು ? ಆ ಪೈಕಿ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಜನರು ಎಷ್ಟು, ಆ ಪೈಕಿ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದವರು ಸಾಗುವಳಿ ಮಾಡಿದ ಭೂಮಿಯ ವಿಸ್ತೀರ್ಣವೆಷ್ಟು ? (ಜಿಲ್ಲಾವಾರು ವಿವರ ನೀಡುವುದು)

ಆ) ರಾಜ್ಯದಲ್ಲಿ ಡಿಸೆಂಬರ್ ೧೯೮೭ ರವರೆಗೆ ಕಾಫಿ, ಟೀ, ಏಲಕ್ಕಿ, ರಬ್ಬರ್ ಭೂಮಿಯ ಒತ್ತುವರಿದಾರರ ಸಂಖ್ಯೆ ಹಾಗೂ ಭೂ ವಿಸ್ತೀರ್ಣದ ಸಂಖ್ಯೆ ಎಷ್ಟು ? ಆ ಪೈಕಿ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದವರು ಸಾಗುವಳಿ ಮಾಡಿದ ಭೂಮಿಯ ವಿಸ್ತೀರ್ಣವೆಷ್ಟು ?

ಇ) ಬಗರ್ ಹುಕುಂ ಸಾಗುವಳಿ ಹಾಗೂ ಒತ್ತುವರಿ ಭೂಮಿಯನ್ನು ಖಾಯಂಗೊಳಿಸುವ ಅಭಿಪ್ರಾಯ ಸರ್ಕಾರಕ್ಕಿದೆಯೆ, ಹಾಗಿದ್ದಲ್ಲಿ ಭೂ ಮಂಜೂರಾತಿ ಕಾನೂನು ಅನ್ವಯವಾಗುವುದೆ, ಹಾಗಿಲ್ಲದಿದ್ದಲ್ಲಿ ಕಾನೂನು ಉಲ್ಲಂಘನೆ ಆಗುವುದಿಲ್ಲವೇ ?

ಈ) ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಒಟ್ಟು ಜನರು : ೩,೬೪,೧೪೫.
ವಿಸ್ತೀರ್ಣ : ೬,೭೬,೪೩೨ ಎಕರೆ ೨೬ ಗುಂಟೆ.
ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನಗಳ ಸಂಖ್ಯೆ ೧,೦೫,೪೪೫
ವಿಸ್ತೀರ್ಣ : ೧,೯೮,೫೦೧ ಎಕರೆ ೨೮ ಗುಂಟೆ. (ದಿನಾಂಕ ೧.೧.೮೮ ರವರೆಗೆ).
(ಜಿಲ್ಲಾವಾರು ವಿವರ–ಅನುಬಂಧ ' ಅ ' ನಲ್ಲಿ ಲಗತ್ತಿಸಿದೆ).

ಆ) ೧೨,೪೦೪ ಜನಗಳು.
೩೫,೦೫೫ ಎಕರೆ ೩೯ ಗುಂಟೆ – ಇದರಲ್ಲಿ ೧೦೨೪ ಜನರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸೇರಿದವರು.
ವಿಸ್ತೀರ್ಣ : ೨೧೬೭ ಎಕರೆ ೦೩ ಗುಂಟೆ (ದಿನಾಂಕ ೧.೧.೮೮ ರವರೆಗೆ).

ಇ) ಬಗರ್ ಹುಕುಂ ಸಾಗುವಳಿ ಹಾಗೂ ಒತ್ತುವರಿ ಭೂಮಿಯನ್ನು ಖಾಯಂಗೊಳಿಸುವ ಉದ್ದೇಶ ಸರ್ಕಾರಕ್ಕಿದೆ. ಇದಕ್ಕೆ ಕರ್ನಾಟಕ ಭೂ ಮಂಜೂರಾತಿ ನಿಯಮಗಳು ಅನ್ವಯವಾಗುವುದಿಲ್ಲ. ಹಾಗೂ ಸದನವೇ ಕಾನೂನು ಮಾಡುವುದರಿಂದ ಉಲ್ಲಂಘನೆ ಆಗುವುದಿಲ್ಲ.

ಈ) ರಾಜ್ಯದಲ್ಲಿ ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ಜಮೀನನ್ನು ಸಕ್ರಮಗೊಳಿಸುವ ಸಲುವಾಗಿ ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ ೯೪ ಕ್ಕೆ ಸೂಕ್ತ ತಿದ್ದುಪಡಿಯನ್ನು ಮಾಡಲು ಕರಡು ಮಸೂದೆಯನ್ನು ತಯಾರಿಸಿದೆ. ಅದು ಈಗ ಒಪ್ಪಿಗೆಗಾಗಿ ಸದನದ ಮುಂದಿದೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ.—ಮಾನ್ಯ ಕಂದಾಯ ಸಚಿವರು ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಒಂದು ಲಕ್ಷ ಚಿಲ್ಲರೆ ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗಕ್ಕೆ ಸೇರಿದವರು ಸುಮಾರು ೨ ಲಕ್ಷ ಎಕರೆ ಜಮೀನನ್ನು ಒತ್ತುವರಿ ಮಾಡಿದ್ದಾರೆಂದೂ, (ಆ) ಪ್ರಶ್ನೆಗೆ ಉತ್ತರವಾಗಿ ಒಂದು ಸಾವಿರ ಚಿಲ್ಲರೆ ಜನರು ಎರಡು ಸಾವಿರ ಎಕರೆ ಜಮೀನನ್ನು ಒತ್ತುವರಿ ಅಥವಾ ಅಕ್ರಮ ಸಾಗುವಳಿ ಮಾಡಿದ್ದಾರೆಂದು ಹೇಳಿದ್ದಾರೆ. (ಇ) ಪ್ರಶ್ನೆಗೆ ಭೂ ಮಂಜೂರಾತಿ ನಿಯಮ ಅನ್ವಯವಾಗುವುದಿಲ್ಲವೆಂದು ಹೇಳಿದ್ದಾರೆ. ಆಗುವುದಿಲ್ಲವೆಂದರೆ ಹೇಗೆ ? ಅಕ್ರಮ ಸಾಗುವಳಿ ಅಥವಾ ಒತ್ತುವರಿ ಮಾಡಿದಾಗ ೬೦ ಪರ್ಸೆಂಟ್ ಅನ್ವಯವಾಗುವ ರೀತಿಯಲ್ಲಿ ಏತಕ್ಕೆ ಕಾನೂನು ತರಬಾರದು ? ಈಗ ಸದನದ ಮುಂದಿರತಕ್ಕ ಕಾನೂನು ೧-೪-೮೪ ರವರೆಗೆ ಅಕ್ರಮ ಸಾಗುವಳಿ ಮಾಡಿದವರಿಗೆ ಮಾತ್ರ ಅನ್ವಯವಾಗುತ್ತದೆ. ನಂತರ ಒತ್ತುವರಿ ಆದ ಭೂಮಿಯನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟವರ್ಗದವರಿಗೆ ಏತಕ್ಕೆ ಮೀಸಲಿಡಬಾರದು ? ಭೂ ಖಾಯಂ ಮಾತಿಯಿಂದ ಬರತಕ್ಕ ಹಣ ಎಷ್ಟು ? ಆದನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನಿರುದ್ಯೋಗಿ ಯುವಕರಿಗೆ ಮೀಸಲಿಟ್ಟು ಕೈಗಾರಿಕೆ ಮತ್ತಿತರ ಯೋಜನೆಯನ್ನು ಮಾಡಿ ಅವರಿಗೆ ಏಕೆ ಉದ್ಯೋಗ ಕಲ್ಪಿಸಬಾರದು ?

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ಮಸೂದೆ ಚರ್ಚೆಯಾಗುವಾಗ ಈ ವಿಚಾರಗಳನ್ನು ಪ್ರಸ್ತಾಪ ಮಾಡಿದರೆ ಅದರಲ್ಲಿ ಅಳವಡಿಸುವುದಕ್ಕೆ ಅನುಕೂಲವಾಗುತ್ತದೆ.

ಅಧ್ಯಕ್ಷರು.—ಈಗ ಅವರು ನೀಡಿರುವ ಉತ್ತರ ಸಮರ್ಪಕವಾಗಿದೆ. ಮಾನ್ಯ ನಿಂಗಯ್ಯನವರೆ, ಕೇಳಿ.

ಅನುಬಂಧ–೧

		ಅನಧಿಕೃತ ಸಾಗುವಳಿದಾರರು		ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳು	
ಕ್ರಮ ಸಂಖ್ಯೆ	ಜಿಲ್ಲೆ	ಜನಸಂಖ್ಯೆ	ವಿಸ್ತೀರ್ಣ ಎ. ಗುಂ.	ಜನಸಂಖ್ಯೆ	ವಿಸ್ತೀರ್ಣ ಎ. ಗುಂ.
೧	೨	೩	೪	೫	೬
೧.	ಬೆಂಗಳೂರು (ನಗರ)	೯,೨೧೧	೭,೮೧೧–೨೭	೪,೨೭೦	೪,೧೨೧–೧೬
೨.	ಬೆಂಗಳೂರು (ಗ್ರಾಮಾಂತರ)	೨೮,೩೭೭	೪೪,೧೫೯–೩೯	೭,೩೨೬	೧೨,೪೦೪–೦೫
೩.	ಬೆಳಗಾಂ	೧,೯೩೨	೧,೧೯೨–೩೧	೭೩೯	೧೭೪–೩೧
೪.	ಬಳ್ಳಾರಿ	೧೭,೪೦೪	೩೭,೪೨೨–೨೨	೫,೩೯೦	೧೧,೭೪೧–೧೪
೫.	ಬೀದರ್	೨,೪೮೦	೯,೪೦೪–೩೬	೧,೭೦೫	೫,೨೮೨–೩೬
೬.	ಬಿಜಾಪುರ	೬೨೭	೧,೦೬೭–೧೪	೧,೩೨೧	೮೩೯–೩೪
೭.	ಚಿಕ್ಕಮಗಳೂರು	೨೬,೨೯೭	೫೬,೫೪೮–೧೪	೬,೫೪೦	೧೩,೦೩೮–೨೧
೮.	ಚಿತ್ರದುರ್ಗ	೨೨,೯೧೭	೪೯,೩೨೬–೨೧	೧೦,೫೭೮	೨೨,೫೭೪–೦೪
೯.	ಮಂಗಳೂರು	೨೯,೯೪೬	೩೫,೬೪೦–೯೬	೫,೫೨೬	೪,೮೦೯–೫೯
೧೦.	ಧಾರವಾಡ	೪,೨೧೭	೮,೫೪೫–೧೧	೧,೫೨೫	೪,೧೬೪–೦೮
೧೧.	ಗುಲ್ಬರ್ಗಾ	೧೨,೨೫೮	೩೮,೩೫೫–೨೪	೧,೭೪೦	೨೨,೪೪೩–೩೨
೧೨.	ಹಾಸನ	೪೩,೪೯೯	೮೧,೯೭೧–೧೦	೯,೩೯೮	೧೭,೪೫೬–೩೬
೧೩.	ಕೊಡಗು	೬,೦೯೧	೮,೭೧೧–೭೪	೭೦೨	೬೯೯–೦೫
೧೪.	ಕೋಲಾರ	೪೧,೪೦೭	೭೨,೮೮೭–೨೦	೧೫,೦೯೨	೨೭,೨೭೨–೨೫
೧೫.	ಮಂಡ್ಯ	೧೫,೦೭೧	೧೮,೫೬೬–೧೪	೨,೩೪೫	೩,೦೩೩–೩೫
೧೬.	ಮೈಸೂರು	೧೮,೩೨೮	೪೨,೩೨೬–೧೦	೫,೫೬೪	೧೨,೩೬೦–೩೭
೧೭.	ರಾಯಚೂರು	೨,೭೪೦	೬,೦೧೯–೨೭	೮೬೩	೨,೮೦೨–೩೬
೧೮.	ಶಿವಮೊಗ್ಗ	೨೬,೭೨೦	೫೨,೩೮೩–೧೮	೫,೫೦೬	೧೦,೯೧೩–೧೯
೧೯.	ತುಮಕೂರು	೪೪,೬೭೦	೮೪,೧೭೫–೨೬	೧೨,೮೬೪	೨೪ ೦೯೫–೦೪
೨೦.	ಉತ್ತರಕನ್ನಡ	೯,೪೫೩	೨೦,೦೧೭–೧೨	೪೫೧೦	೨೭೧–೧೧
	ಒಟ್ಟು	೩,೬೪,೧೪೫	೬,೭೬,೪೩೨–೨೬	೧,೦೫,೪೪೫	೧,೯೮,೫೧೧–೨೮

ಶ್ರೀ ಬಿ.ಬಿ. ನಿಂಗಯ್ಯ.—ಅಧ್ಯಕ್ಷರೇ, ನನ್ನದು ಹೆಸರಿದೆ.

ಅಧ್ಯಕ್ಷರು.—ಮಂತ್ರಿಗಳು ಸಮರ್ಪಕವಾಗಿ ಉತ್ತರ ಕೊಟ್ಟಿದ್ದಾರೆ.

ಶ್ರೀ ಬಿ.ಬಿ. ನಿಂಗಯ್ಯ.—ಸನ್ಮಾನ್ಯ ಅಧ್ಯಕ್ಷರೆ, ನಾವು ಕೇಳಿದ ಪ್ರಶ್ನೆಗೆ ಸಚಿವರು ಉತ್ತರ ಕೊಡುತ್ತಾ ಇಂತಿಷ್ಟು ಜಮೀನು ಎಂದು ಅಂಕಿಅಂಶ ಕೊಟ್ಟಿದ್ದಾರೆ, ನಾನು ಇದರಲ್ಲಿ ವಿವರವನ್ನು ಕೇಳಿದ್ದೆ. ಕಾಫಿ, ಏಲಕ್ಕಿ, ಟೀ, ರಬ್ಬರ್ ಬೆಳೆಗಳನ್ನು ಒಟ್ಟು ಎಷ್ಟು ಬೆಳೆದಿದ್ದಾರೆ ಎಂದು ಕೊಟ್ಟರು ವುದು ಬಿಟ್ಟರೆ ಎಷ್ಟೆಷ್ಟು ಬೆಳೆದಿದ್ದಾರೆ ಎಂಬುದನ್ನು ಹೇಳಿಲ್ಲ. ಕಾಫಿ, ಟೀ, ಏಲಕ್ಕಿ, ರಬ್ಬರ್ ಬೆಳೆಯಲ್ಲಿ ಏನು ಒತ್ತುವರಿಕೆಯಾಗಿದೆ, ಏನು ಅಕ್ರಮ ಸಾಗುವಳಿಯಾಗಿದೆ ಅದರಲ್ಲಿ ಎಸ್.ಸಿ.ಎಸ್.ಟಿ. ಜನರು ಎಷ್ಟಿದ್ದಾರೆ ಎಂಬುದನ್ನು ಹೇಳಬೇಕು. 'ಇ' ಪ್ರಶ್ನೆಗೆ ಉತ್ತರ ಹೇಳುತ್ತಾ ಸಚಿವರು ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ಒತ್ತುವರಿ ಭೂಮಿಯನ್ನು ಖಾಯಂಗೊಳಿಸುವ ಉದ್ದೇಶ ಸರ್ಕಾರಕ್ಕಿದೆ, ಕರ್ನಾಟಕ ಭೂ ಮಂಜೂರಾತಿ ನಿಯಮ ಇದಕ್ಕೆ ಅನ್ವಯಿಸುವುದಿಲ್ಲ ಎಂದು ಹೇಳಿದ್ದಾರೆ. ಹಾಗಿದ್ದರೆ ಈ ಕಾನೂನು ಏತಕ್ಕೆ ಬೇಕು ? ಹಾಗೂ ಸದನವೇ ಕಾನೂನು ಮಾಡುವುದರಿಂದ ಉಲ್ಲಂಘನೆಯಾಗುವುದಿಲ್ಲ ಎಂದೂ ಹೇಳಿದ್ದಾರೆ. ನಾನು ಒಪ್ಪಿಕೊಳ್ಳುತ್ತೇನೆ. ಸದನಕ್ಕೆ ಆ ಅಧಿಕಾರ ಇದೆ. ಕಾನೂನು ಮಾಡತಕ್ಕ ಸಂದರ್ಭದಲ್ಲಿ ಸಚಿವರು ಯಾರ ಹಿತವನ್ನು ಕಾಪಾಡುವುದಕ್ಕಾಗಿ ಕಾನೂನು ಮಾಡುತ್ತಾರೋ, ಭೂರಹಿತ ಬಡವರು, ದಲಿತರು ಕೂಲಿ ಕಾರ್ಮಿಕರು, ಇಂಥವರಿಗೆ ಸಾಮಾಜಿಕ ನ್ಯಾಯ ಸಿಗತಕ್ಕ ರೀತಿಯಲ್ಲಿ ಕಾನೂನನ್ನು ತಿದ್ದುಪಡಿ ಮಾಡುವುದಕ್ಕಾಗುತ್ತದೆಯೇ ? ಮೂರನೇ ಪ್ರಶ್ನೆ, ಭೂಮಿಯನ್ನು ಹೊಂದಿಲ್ಲದೆ ಹಳ್ಳಿಯಲ್ಲೇ ಹುಟ್ಟಿ ಕೂಲಿಯಿಂದ ಜೀವನ ಮಾಡ ತಕ್ಕ ಜನರಿಗೆ ಕಾನೂನಿನ ನೆರವು ಕೊಡುತ್ತೀರಾ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಈಗಾಗಲೇ ನಾನು ವಿವರಗಳನ್ನು ಕೊಟ್ಟಿದ್ದೇನೆ. ಜಿಲ್ಲಾ ವಾರು ವಿವರಗಳನ್ನು ಕೊಟ್ಟಿದ್ದೇನೆ, ಕಾಫಿ ಮುಂತಾದ ಪ್ಲಾಂಟೇಷನ್‌ಗಳಲ್ಲಿ ಎಸ್.ಸಿ.ಎಸ್.ಟಿ. ಜನರು ಎಷ್ಟಿದ್ದಾರೆ ಎಂಬ ಅಂಕಿಸಂಖ್ಯೆಗಳನ್ನು ಕೇಳಿದ್ದಾರೆ. ಆ ವಿವರ ಈಗಿಲ್ಲ. ಒದಗಿಸಿಕೊಡುತ್ತೇನೆ.

ಶ್ರೀ ಪುಲ್ಲಿಕಾರ್ಜುನ ಎಂ. ಖಾರ್ಗೆ.—ಈಗ ಒಂದು ಪ್ರಶ್ನೆ ಏನು ಉದ್ಭವಿಸುತ್ತದೆ ಅಂದರೆ ತಪಂಗೆ ಗೊತ್ತಿರುವ ಹಾಗೆ ಈ ಲ್ಯಾಂಡನ್ನು ಡಿಸ್ಟ್ರಿಬ್ಯೂಟ್ ಮಾಡುವುದಕ್ಕೆ ಅವೈಲಬಲ್ ಇದ್ದಿದ್ದರೆ ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ೬೦ ಪರ್ಸೆಂಟ್ ಎಸ್‌ಸಿ, ಎಸ್‌ಟಿಗೆ ಹೋಗುತ್ತಿತ್ತು. ಒತ್ತುವರಿ ಯಾಗಿರುವ ಒಟ್ಟು ಜಮೀನು ೬,೭೬,೪೮೨ ಎಕರೆ ೨೬ ಗುಂಟೆಗಳು. ಇದರಲ್ಲಿ ಪೆಡ್ಡೋಲ್ಡ್ ಕ್ಯಾಸ್ಟ್ ಮತ್ತು ಪೆಡ್ಡೋಲ್ಡ್ ಟ್ರೈಬ್‌ಸವರು ಒತ್ತುವರಿ ಮಾಡಿಕೊಂಡಿರುವುದು ೧,೯೮,೫೦೦ ಎಕರೆ. ಅಂದರೆ ಏನಾಯಿತು ? ಹತ್ತಿರ ಹತ್ತಿರ ೨ ಲಕ್ಷ ಎಕರೆ ಆಯಿತು. ಇನ್ನು ೪,೭೬,೦೦೦ ಎಕರೆ ಜಮೀನನ್ನು ಇತರೆಯವರು ಎನ್‌ಕ್ರೋಚ್ ಮಾಡಿದ್ದಾರೆ. ರೆಗ್ಯುಲರೈಸ್ ಮಾಡಿದರೂ ಕೂಡ ಕಾನೂನು ಪ್ರಕಾರ ೬೦ ಪರ್ಸೆಂಟ್ ಎಸ್‌ಸಿ.ಎಸ್‌ಟಿ, ಯವರಿಗೆ ಮಾಡಬೇಕಾಗುತ್ತದೆ. ಅವರಿಗೆ ಬರತಕ್ಕ ಭೂಮಿಯನ್ನು ಯಾರು ಜಬರದಸ್ತಿ ಮಾಡುತ್ತಿದ್ದಾರೋ, ಯಾರದು ನಡೆಯುತ್ತಿತ್ತೋ, ಯಾರು ಪ್ರಭಾವಿತರು ಮತ್ತು ಶಕ್ತಿವಂತರಿದ್ದರೋ ಅಂಥವರು ಎನ್‌ಕ್ರೋಚ್ ಮಾಡಿದ್ದಾರೆ. ಅದಕ್ಕೆ ಈಗ ಭೂ ಕಾಯಿದೆಗೆ ತಿದ್ದುಪಡಿಯನ್ನು ತಕ್ಷಣ ತಂದರೆ ಅದರ ಪರಿಣಾಮ ಎಸ್‌ಸಿ.ಎಸ್‌ಟಿ. ಯವರಿಗೆ ತೊಂದರೆಯಾಗುತ್ತದೆ. ಎಂಬುದನ್ನು ನೆನಪಿನಲ್ಲಿಡಬೇಕಾಗುತ್ತದೆ. ಅದಕ್ಕೆ ನೀವು ಒಂದು ನೀತಿಯನ್ನು ಅನುಸರಿಸ ಬಹುದು. ಏನು ? ಇವರಿಗೆ ೬೦ ಪರ್ಸೆಂಟ್ ಬರತಕ್ಕದ್ದನ್ನು ಕೊಟ್ಟು ಉಳಿದಿದ್ದನ್ನು ರೆಗ್ಯುಲರೈಸ್ ಮಾಡಿದರೆ ಅದರಲ್ಲಿ ಸ್ವಲ್ಪ ಅರ್ಥ ಇದೆ ಎಂದು ಹೇಳಬಹುದು. ಅವನ್ನು ಸಾಂತಾಸಗಟಾಗಿ ಮಾಡಿ ಬಿಟ್ಟರೆ ಯಾರು ಶಕ್ತಿವಂತರಿದ್ದಾರೆ ಅವರಿಗೆ ಕೊಟ್ಟ ಹಾಗೆ ಆಗುತ್ತದೆ. ನಿಮ್ಮ ನಿಮ್ಮ ಲೆಕ್ಕದ ಪ್ರಕಾರ ೧,೯೮,೦೦೦ ಎಕರೆ ಮಾತ್ರ ಇವರು ಎನ್‌ಕ್ರೋಚ್ ಮಾಡಿದ್ದಾರೆ. ಲ್ಯಾಂಡ್ ಡಿಸ್ಟ್ರಿಬ್ಯೂಟ್ ರೂಲ್ಸ್ ಪ್ರಕಾರ ಮಾಡಿದ್ದರೆ ೩,೫೦,೦೦೦ ಎಕರೆ ಬರುತ್ತಿತ್ತು. ಒಂದು ಕಡೆ ಸಹಾಯ ಮಾಡು ವುದಕ್ಕೆ ಕಾನೂನು ಮಾಡಿ ಇನ್ನೊಂದು ಕಡೆ ಇರತಕ್ಕ ಹಕ್ಕುಗಳನ್ನು ತೆಗೆದುಕೊಳ್ಳತಕ್ಕ ರೀತಿಯಲ್ಲಿ ಆಗಬಾರದು ಇದನ್ನು ಲಕ್ಷ್ಯದಲ್ಲಿಟ್ಟುಕೊಂಡು ಕಾನೂನು ಜಾರಿಯಲ್ಲಿ ತರಬೇಕಾಗುತ್ತದೆ. ದಯವಿಟ್ಟು ಇದರ ಬಗ್ಗೆ ಸ್ಪಷ್ಟೀಕರಣ ನೀಡಬೇಕು ಇಲ್ಲ ಅಂದರೆ ಎಲ್ಲಾ ಲ್ಯಾಂಡನ್ನು ಗವರ್ನಮೆಂಟಿಗೆ ತೆಗೆದು ಕೊಂಡು ರೂಲ್ಸ್ ಪ್ರಕಾರ ಡಿಸ್ಟ್ರಿಬ್ಯೂಟ್ ಮಾಡಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ಗೌರ್ನಮೆಂಟ್ ತೆಗೆದುಕೊಳ್ಳುವುದು ಕಷ್ಟ ಇದೆ. ಸದನದ ಮುಂದೆ ಮಸೂದೆ ಬಂದಾಗ ಎಲ್ಲಾ ಅಂಕಿಅಂಶ ಕೊಡುತ್ತೇನೆ. ಪೆಡ್ಡೂಲ್ಡ್ ಕ್ಯಾಸ್ಟ್‌ದಷ್ಟೇ ಇಲ್ಲಿ ಕೊಟ್ಟಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಎರಡೂ ಕೊಟ್ಟಿದ್ದೀರಿ. ಪೆಡ್ಡೂಲ್ಡ್ ಕ್ಯಾಸ್ಟ್ ಮತ್ತು ಪೆಡ್ಡೂಲ್ಡ್ ಟ್ರೈಬ್ ಮತ್ತು ಇತರರು ಮೂರೂ ಸೇರಿ ೬,೭೬,೪೮೨ ಎಕರೆ ಒಟ್ಟು ಎನ್‌ಕ್ರೋಚ್ ಆಗಿರುವುದು.

ಶ್ರೀ ಎಸ್.ಆರ್. ಬೊಮ್ಮಾಯಿ.—ಇದರಲ್ಲಿ ೨೦ ಪರ್ಸೆಂಟ್ ಭೂಹೀನರಿದ್ದಾರೆ. ಮಾರ್ಜಿನಲ್ ಫಾರ್ಮರ್ಸ್ ಇದ್ದಾರೆ. ಇತರರು ಒಹಳ ಕಡಿಮೆ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಕಾಲಂ ನಂಬರ್ ೬ ನೋಡಿ.

೧೧.೦೦ ಎ.ಎಂ.

ಶ್ರೀ ಎಸ್.ಆರ್. ಬೊಮ್ಮಾಯಿ.—ಇದರ ಉದ್ದೇಶವೇನೆಂದರೆ, ಅದರಲ್ಲಿ ಲ್ಯಾಂಡ್‌ಲೆಸ್ ಎಷ್ಟು ಪರ್ಸೆಂಟ್ ಇದ್ದಾರೆ? ಮಾರ್ಜಿನಲ್ ಫಾರ್ಮರ್ ಎಷ್ಟು ಪರ್ಸೆಂಟ್ ಇದ್ದಾರೆ? ಅದೇರೀತಿ ಲ್ಯಾಂಡ್‌ಲೆಸ್ ಲೇಬರರ್ಸ್ ಹಾಗೂ ಎಸ್‌ಸಿ./ಎಸ್‌ಟಿ.ಯವರೆಲ್ಲರೂ ಸೇರಿ ೮೦ ಪರ್ಸೆಂಟ್ ಅವರೇ ಇದ್ದಾರೆ; ಅವನ್ನು ಬಿಟ್ಟರೆ, ಇನ್ನುಳಿದವರು ೧೦-೧೫ ಪರ್ಸೆಂಟ್ ಇದ್ದಾರೆ, ಬೇರೆ ಜನರಿಂದ ಸರ್ಕಾರದ ಭೂಮಿ ಒತ್ತುವರಿಯಾಗಿಲ್ಲ. ನನ್ನ ಹತ್ತಿರ ಆ ಬಗ್ಗೆ ಅಂಕಿ ಅಂಶಗಳು ಈಗ ಇಲ್ಲ. ಆದರೆ ಅವುಗಳ ಅಂಕಿ ಅಂಶಗಳನ್ನು ಕಲೆಕ್ಟ್ ಮಾಡಲಾಗಿದೆ. ಭೂ ಹೀನರು ಯಾರು ಇದ್ದಾರೆ ಅವರೂ ಕೂಡ ದಲಿತರೇ, ದಲಿತರು ಅಂದರೆ ಕೇವಲ ಎಸ್‌ಸಿ/ಎಸ್‌ಟಿ.ಯವರೇ ಅಲ್ಲ. ಬಡವರು ಯಾರು ಇದ್ದಾರೆ, ಅವರೂ ದಲಿತರೇ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಕಾನೂನು ದೃಷ್ಟಿಯಿಂದ ನೋಡಬೇಕಾಗುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ದಲಿತರು ಅಂದರೆ ಭೂ ಹೀನರು, ಬಡವರು ಏನು ಇದ್ದಾರೆ, ಅವರೆಲ್ಲರೂ ದಲಿತರೆ, ಅದರಲ್ಲಿ ಅವರೆಲ್ಲರನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಆ ದೃಷ್ಟಿಯಿಂದ ಮಸೂದೆಯನ್ನು ತಂದಿದ್ದೇವೆ. ಅದು ಈ ಮನೆಯ ಮುಂದೆ ಚರ್ಚೆ ಬಂದಾಗ ಸಲಹೆಗಳನ್ನು ಕೊಡಿ. ಅದನ್ನು ಮತ್ತೆ ತಿದ್ದುಪಡಿ ಮಾಡುವ ಅಗತ್ಯ ಕಂಡು ಬಂದರೆ ತಿದ್ದುಪಡಿ ಮಾಡೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಬಡವರು ಅಂತ ತಾವು ಏನು ಹೇಳಿದ್ದೀರಿ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ಸಮಾಜದಲ್ಲಿ ಬಡವರು ಬಹಳಷ್ಟು ಜನ ಎಲ್ಲಾ ಜಾತಿಯಲ್ಲೂ ಇದ್ದಾರೆ. ಆದರೆ ಅವರು ಬಡವರು ಅಂತ ಹೇಳಿ ಎಸ್‌ಸಿ./ಎಸ್‌ಟಿ.ಯವರಿಗೆ ವಿಂಗಡಣೆಯ ಆಧಾರದ ಮೇಲೆ ಸೀಟನ್ನು ಕೊಡುವುದಕ್ಕೆ ಬರುವುದಿಲ್ಲ. ಆದೇ ರೀತಿ ಅವರಿಗೆ ವಿದ್ಯಾಭ್ಯಾಸದಲ್ಲಿ ವಿಂಗಡಣೆಯನ್ನು ಕೊಟ್ಟು ಅನುಕೂಲವನ್ನು ಮಾಡಿಕೊಡುವುದಕ್ಕಾಗುವುದಿಲ್ಲ. ಕಾನೂನನ್ನು ರಕ್ಷಣೆ ಮಾಡಬೇಕಾದರೆ ಅವರ ಪಾಲಿಗೆ ಬರತಕ್ಕಂಥದ್ದನ್ನಾದರೂ ಕೊಡಬೇಕಲ್ಲ, ಅವರ ಪಾಲಿಗೆ ಬರ ತಕ್ಕಂತಹದ್ದು ಏನು ಇದೆ, ಅದನ್ನು ಕಾನೂನಿ ಪ್ರಕಾರ ಕೊಟ್ಟು ಉಳಿದದ್ದನ್ನು ಬೇರೆಯವರಿಗೆ ಹಂಚಬೇಕು. ಎರಡನೆಯದಾಗಿ, ನಾವು ಅಧಿಕಾರದಲ್ಲಿದ್ದಾಗಲೇ ಸರ್ಕಾರ ಒಂದು ಆರ್ಡರನ್ನು ಹೊರಡಿಸಿತ್ತು. ಅದು ಏನೆಂದರೆ, ಈ ಎಸ್‌ಸಿ./ಎಸ್‌ಟಿ. ಜನರು ಯಾರು ೧೯೮೧ಕ್ಕಿಂತ ಮುಂಚೆ ಒಂದು ವರ್ಷದಿಂದ ಸಾಗುವಳಿ ಮಾಡಿದ್ದಾರೋ, ಹಾಗೂ ಅವರು ಆ ಭೂಮಿಯನ್ನು ತಮ್ಮ ಸ್ವಾಧೀನ ದಲ್ಲಿಟ್ಟುಕೊಂಡಿದ್ದಾರೊ, ಅಂತಹವರ ಬಗ್ಗೆ ಸ್ಪಾಟ್‌ಇನ್ವೆಸ್ಟಿಗೇಷನ್ ಮಾಡಿ ಅವರಿಗೆ ರೆಗ್ಯುಲರೈಸ್ ಮಾಡಬೇಕೆಂಬ ಆದೇಶವನ್ನು ನೀಡಲಾಗಿತ್ತು. ನನ್ನ ನೆನಪಿನ ಪ್ರಕಾರ ೧೯೮೧ರ ಆಗಸ್ಟ್ ತಿಂಗಳು ಅಂತ ಕಾಣುತ್ತೆ. ಅದರ ಪ್ರಕಾರ ಇಷ್ಟರವರೆಗೆ ಅದೆಲ್ಲಾ ರೆಗ್ಯುಲರೈಸ್ ಆಗಲೇಬೇಕಾಗಿತ್ತು, ಅದು ಇದುವರೆವಿಗೂ ಹೇಗೆ ಉಳಿಯಿತು? ಇದರಲ್ಲಿ ಮಾರ್ಜಿನಲ್ ಫಾರ್ಮರ್, ಸ್ಮಾಲ್ ಫಾರ್ಮರ್ ಎಂಬ ಪ್ರಶ್ನೆ ತರುವುದು ಬೇಡ. ಅವರಿಗೆ ಕಾನೂನು ಪ್ರಕಾರ ಕೊಡಬೇಕಾಗಿರುವುದನ್ನು ಕೊಟ್ಟು ಉಳಿದುದನ್ನು ಕೊಡುವಾಗ ಮಾನವೀಯತೆಯಿಂದ ಬೇರೆಯವರಿಗೂ ಕೊಡಿ. ಭೂ-ಹೀನರು, ಸ್ಮಾಲ್ ಫಾರ್ಮರ್, ಮಾರ್ಜಿನಲ್. ಲ್ಯಾಂಡ್‌ಲೆಸ್ ಲೇಬರರ್ಸ್ ಇವರೆಲ್ಲರನ್ನೂ ಸೇರಿಸಿಕೊಂಡು, ೮೦ ಪರ್ಸೆಂಟ್ ಇವರೇ ಇದ್ದಾರೆ ಎಂಬುದು ಬೇಡ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಸೂದೆ ಚರ್ಚೆಗೆಬಂದಾಗ ಪೂರ್ಣವಾಗಿ ಚರ್ಚೆ ಮಾಡೋಣ. ಪ್ರಶ್ನೋತ್ತರ ಕಾಲದಲ್ಲಿ ಎಲ್ಲಾವಿವರಗಳನ್ನು ಒದಗಿಸುವುದಕ್ಕಾಗುವುದಿಲ್ಲ. ಆದರೆ ಭೂಮಿಯನ್ನು ಸಾಗುವಳಿಗಾಗಿ ಎಸ್. ಸಿ. ಎಸ್. ಟಿ. ಯವರಿಗೆ ಕೊಡತಕ್ಕಂತದ್ದರಲ್ಲಿ ಹಿಂದೆ ಬೀಳುವುದಿಲ್ಲ. ಅವರ ಜೊತೆಗೆ ಬೇರೆಯವರೂ ಇದ್ದಾರೆ. ಅವರ ಬಗ್ಗೆಯೂ ಕೂಡ ವಿಚಾರ ಮಾಡಬೇಕಾಗುತ್ತದೆ. ಆ ಬಗ್ಗೆ ಮಸೂದೆ ಮನೆಯ ಮುಂದೆ ಇದೆ. ಅದು ಚರ್ಚೆಗೆ ಬಂದಾಗ ಸಲಹೆಗಳನ್ನು ಕೊಡಿ. ತಾವು ಕೊಡುವಂತಹ ಸಲಹೆಗಳನ್ನು ನೋಡಿ ಅವಶ್ಯಕತೆ ಬಂದರೆ ಪುನಃ ತಿದ್ದುಪಡಿ ಮಾಡೋಣ.

ಶ್ರೀ ಬಿ. ಬಸವಲಿಂಗಪ್ಪ.—ಬಹಳ ಸಂತೋಷ ಅಂಕಿ ಅಂಶಗಳನ್ನು ಕೊಟ್ಟಿದ್ದೀರಿ. ಒಟ್ಟು ೬ ಲಕ್ಷ ೭೬ ಸಾವಿರ ಳಲ್ಲಿ ಎಕರೆ ೨೪ ಗುಂಟೆ ಜಮೀನನ್ನು ಅಕ್ರಮ ಸಾಗುವಳಿ ಮಾಡಿದ್ದಾರೆ. ಹಿಂದೆ ನಾನು. ೧೯೭೭ರಲ್ಲಿ ಕಂದಾಯ ಮಂತ್ರಿಯಾಗಿದ್ದಾಗ ಯಾರ್ಯಾರು ಸರ್ಕಾರಿ ಭೂಮಿಯನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೋ. ಅವರೆಲ್ಲರನ್ನೂ ಸಕ್ರಮಗೊಳಿಸಿ ಅಂತ ಮಾಡಿದ್ದೇವೆ. ಅದನ್ನು ಮಾಡಿ ಮುಗಿಸಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮುಗಿದಿಲ್ಲ.....

ಶ್ರೀ ಬಿ. ಬಸವಲಿಂಗಪ್ಪ.—ಮಾಡಿದೆ. ಇಲ್ಲ ಅಂತ ಹೇಳಬೇಡಿ. ನೀವು ನಮ್ಮ ನಂತರ ಅಧಿಕಾರಕ್ಕೆ ಬಂದಿದ್ದೀರಿ. ಜಗತ್ತಿನ ವಿಷಯವೆಲ್ಲಾ ಗೊತ್ತಿದೆ ಅಂತ ತಿಳಿದು ಕೊಂಡು ಮಾಡುವುದಕ್ಕೆ ಹೋಗಬೇಡಿ. ವಾಸ್ತವ ಸಂಗತಿಯನ್ನು ತಿಳಿದುಕೊಳ್ಳಿ. ಶ್ರೀಮಾನ್ ಮಲ್ಲಿಕಾರ್ಜುನ್ ಖರ್ಗೆ ಯವರು ಹೇಳಿದಾಗೆ ೧೯೮೧ನೇ ಇಸವಿಯಲ್ಲಿ ಎಷ್ಟೆಷ್ಟು ಜನ ಬಡವರು ಅಕ್ರಮ ಸಾಗುವಳಿ ಮಾಡಿದ್ದಾರೋ ಅಂತಹವರನ್ನು ಸಕ್ರಮಗೊಳಿಸಿ ಅಂತ ಸರ್ಕಾರದ ಆದೇಶ ಹೊರಸಿದ್ದರೂ ೧೯೮೧ ರಿಂದ ೧೯೮೮ ರವರೆಗೂ ಉಳಿದುಕೊಂಡು ಬರಲು ಕಾರಣವೇನು ? ಮತ್ತೆ ೧೯೮೧ ರಿಂದ ೧೯೮೮ರವರೆಗೆ ಎಷ್ಟೆಷ್ಟು ಜನರು ಸರ್ಕಾರದ ಭೂಮಿಯನ್ನು ಅಕ್ರಮವಾಗಿ ಸಾಗುವಳಿ ಮಾಡಿವ್ವಾರೋ ಅಂತಹವರ ಬಗ್ಗೆ ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕು. ಏಕೆಂದರೆ ಭೂಮಿ ವಿಸ್ತಾರವಾಗುತ್ತಾ ಹೋಗುವುದಿಲ್ಲ. ಇರುವ ಭೂಮಿಯನ್ನು ಹಂಚಬೇಕಾಗುತ್ತದೆ. ಬಡವರು, ಭೂ-ಹೀನರು ಎಂಬ ಪ್ರಶ್ನೆಯನ್ನು ಗಣನೆಗೆ ತೆಗೆದು ಕೊಂಡು ಯಾರು ಹರಿಜನ-ಗಿರಿಜನರು ಇದ್ದಾರೆ, ಅವರಿಗೆ ಕಾನೂನು ಪ್ರಕಾರ ೬೦ ಪರ್ಸೆಂಟ್ ಭೂಮಿಯನ್ನು ಕೊಡಲೇಬೇಕಾಗುತ್ತದೆ. ಇದನ್ನು ಆಧಾರವಾಗಿಟ್ಟುಕೊಂಡು ೩೦-೪೦ ಸಾವಿರ ಎಕರೆಗಟ್ಟಲೆ ಕಾಫಿ ಏಲಕ್ಕಿ ಬೆಳೆಯುವುದಕ್ಕೆ ಸರ್ಕಾರದ ಭೂಮಿಯನ್ನು ಯಾರು ಒತ್ತುವರಿ ಮಾಡಿದ್ದಾರೆ, ಅಂತಹವರಿಗೂ ಸಕ್ರಮಗೊಳಿಸತಕ್ಕಂತಹದ್ದು ಸಲ್ಲದ ಮಾತು. ಆದ್ದರಿಂದ ಪರಿಶೀಲನೆ ಮಾಡಿ ತಾವು ಹೇಳಬೇಕು.

ಶ್ರೀ ಬಿ. ರಾಚಯ್ಯ.—ಪ್ರಶ್ನೆಯನ್ನು ಕೇಳದೆ ಭಾಷಣ ಮಾಡುತ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಪ್ರಶ್ನೆ ಕೇಳುವುದು ನನಗೆ ಗೊತ್ತಿಲ್ಲವಾ ?

ಅಧ್ಯಕ್ಷರು.—ನೇರವಾಗಿ ಪ್ರಶ್ನೆ ಕೇಳಿ. ಭಾಷಣ ಮಾಡಿದರೆ ಹೇಗೆ ?

ಶ್ರೀ ಬಿ. ಬಸವಲಿಂಗಪ್ಪ.—ಆಯಿತು. ನಾನು ಹೇಳುತ್ತಿದ್ದೇನೆ, ಯಾರು ಇದುವರೆವಿಗೂ ಜಮೀನ್ದಾರರಾಗಿದ್ದಾರೆ, ಪಾಲಕ್ಕೆ ಪ್ಲಾಂಟೇಷನ್‌ನವರು ಇರಲಿ ಅವರು ಅತಿಕ್ರಮ ಮಾಡಿರುವ ಜಾಗವನ್ನು ಸಕ್ರಮ ಮಾಡುವ ಕೆಲಸವನ್ನು ಸರ್ಕಾರ ಮಾಡಬಾರದು. ಎಸ್. ಸಿ. ಯವರಿಗೆ ೬೦ ಪರ್ಸೆಂಟ್ ಏಕೆ ಮಾಡಿದ್ದೇವೆ ಎಂದರೆ ಎಸ್. ಸಿ. ಯವರಿಗೆ ೭೭ರವರೆಗೆ ಯಾರಿಗೂ ಮಾಡೇ ಇರಲಿಲ್ಲ. ಬರೀ ಬೇರೆಯವರಿಗೇ ಮಾಡಿದ್ದಾರೆ. ಆದಕ್ಕೋಸ್ಕರವಾಗಿ ಈ ಜಮೀನು ಏನಿದೆ, ಮಾನ್ಯ ಖಾರ್ಗೆಯವರು ಹೇಳಿದಹಾಗೆ ೬೦ ಪರ್ಸೆಂಟ್ ಏನು ಸರ್ಕಾರಿ ಜಮೀನು ಇವೆ ಅದನ್ನು ಬರೀ ಪಡ್ಡೂಲ್ಡ್ ಕಾಸ್ಟ್‌ನವರಿಗೆ ಕೊಟ್ಟು ಯಾರು ನಿರ್ಗತಿಕರು ಇದ್ದಾರೆ, ಬಲಹೀನರಿದ್ದಾರೆ ಅಂತಹವರಿಗೆ ಮಾಡುವ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಈಗಾಗಲೇ ಹೇಳಿದ್ದೇನೆ. ಬಗರ್‌ಹುಕ್ಕುಮ್ ಸಾಗುವಳಿ ಮಾಡಿರುವವರಲ್ಲಿ ಪರಿಶಿಷ್ಟಜಾತಿ ಹಾಗೂ ಪಂಗಡದವರು ಶೇಕಡಾ ೨೯.೯, ಭೂಹೀನರು ಶೇಕಡಾ ೨೨.೯, ಅತಿಸಣ್ಣರೈತರು ೨೦ ಪರ್ಸೆಂಟ್ ಹಾಗೂ ಇತರರು ೨೭ ಪರ್ಸೆಂಟ್ ಎಂದು ಮಾಹಿತಿ ಪ್ರಕಾರ ಇದೆ. ಇರತಕ್ಕದ್ದು ಏನಿದೆ ಇದನ್ನು ಸಕ್ರಮಗೊಳಿಸುವ ಬಗ್ಗೆ ಮಸೂದೆಯನ್ನು ತಂದಿದ್ದೇವೆ ಮಾನ್ಯ ಬಸವಲಿಂಗಪ್ಪನವರು ಕಂದಾಯಮಂತ್ರಿಯಾಗಿದ್ದಾಗಿನ ವಿಷಯ ಮರೆತುಬಿಟ್ಟಿದ್ದಾರೆ. ಇದು ನಿಮ್ಮ ಕಾಲದಲ್ಲೇ ಮುಗಿಯಲಿಲ್ಲ. ಆಗ ಹರಿಜನರ ಹೆಸರಿನಲ್ಲಿ ಬೇರೆಯವರು ಹಣಹಿದಿರುವುದ

ಬೇಕಾದಷ್ಟು ಇದೆ. ಅನೇಕ ಜನ ತಿಳುವಳಿಕೆ ಇಲ್ಲದೇ ಅರ್ಜಿಯನ್ನೇ ಹಾಕಲಿಲ. ೨೦ ವರ್ಷ ಮಾಡಿರುವವರೂ ಹಾಕಿಲ್ಲ. ರಾಜ್ಯದಲ್ಲಿ ಈ ಬಗ್ಗೆ ಒತ್ತಡ ಬಂದಮೇಲೆ ಕಾನೂನು ತಂದಿದ್ದೇವೆ. ಇದರಿಂದಲೇ ಸರ್ಕಾರದ ಸದುದ್ದೇಶ ಸ್ಪಷ್ಟವಾಗುತ್ತದೆ. ಮುಸೂದೆ ಬಂದಾಗ ಏನು ಸಲಹೆ ಕೊಡುತ್ತೀರಿ ಅದನ್ನು ಸ್ವೀಕಾರ ಮಾಡುತ್ತೇನೆ. ಪ್ರಶ್ನೋತ್ತರ ಕಾಲದಲ್ಲಿ ಹೆಚ್ಚು ಚರ್ಚೆಮಾಡುವುದ ಕ್ಕಾಗುವುದಿಲ್ಲ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು. ಆದಾಗ್ಯೂ ಇಲ್ಲಿಯವರೆಗೆ ೭ ಪ್ರಶ್ನೆಗಳು ಮಾತ್ರ ಮುಗಿದಿವೆ. ಇನ್ನೂ ೧೪ ಪ್ರಶ್ನೆತಳು ಇದ್ದು ಲ್ಲಿವುಗಳನ್ನು ಲ್ಯಾಪ್ಸ್ ಮಾಡುವುದು ಬೇಡ. ಆದ್ದರಿಂದ ಪ್ರಶ್ನೆ ಕೇಳುವ ಸದಸ್ಯರು ಕೇವಲ ಒಂದೊಂದೇ ಉಪಪ್ರಶ್ನೆಗಳನ್ನು ಕೇಳಿದರೆ ನಿಮ್ಮೆಲ್ಲರ ದೃಷ್ಟಿಯಿಂದ ಒಳ್ಳೆಯದಾಗುತ್ತದೆ. ಮುತ್ತೆ ಪ್ರಶ್ನೆ ಕೇಳಿದವರಲ್ಲದೇ ಬೇರೆಯವರು ಉಪಪ್ರಶ್ನೆ ಕೇಳುವುದಕ್ಕೆ ಅವಕಾಶ ಇಲ್ಲ. ಈಗ ಮಾನ್ಯ ಕೆ. ಹೆಚ್. ಪಾಟೀಲರು ಪ್ರಶ್ನೆ ಕೇಳಲಿ.

ಕೆ. ಸಿ. ಸಿ. ಬ್ಯಾಂಕ್‌ನಲ್ಲಿ ನಾಮ ನಿರ್ದೇಶನ

೮೯೮ (೧೮೪೨) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕೆ. ಸಿ. ಸಿ. ಬ್ಯಾಂಕ್ ಧಾರವಾಡ ಎಷ್ಟು ಬಂಡವಾಳವನ್ನು ಷೇರು ರೂಪದಲ್ಲಿ ಸಂಗ್ರಹಿಸಿದೆ?

ಆ) ಬ್ಯಾಂಕಿನ ಆಡಳಿತ ಮಂಡಳಿಗೆ ನಾಮ ನಿರ್ದೇಶನಗೊಂಡಿರು ವ್ಯಕ್ತಿಗಳ ಸಂಖ್ಯೆ?

ಇ) ಈ ನಾಮ ನಿರ್ದೇಶನಗಳನ್ನು ಚುನಾವಣೆಯ ಸಮಯದಲ್ಲಿ ಮಾಡಲಾಗಿದೆ ಯೆಂಬುದ ನಿಜವೇ ?

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು).—

ಅ) ದಿನಾಂಕ ೩೦-೬-೮೭ಕ್ಕೆ ರೂ. ೩೫೩.೮೩ ಲಕ್ಷಗಳು.

ಆ) ಸರ್ಕಾರದಿಂದ ನಾಲ್ಕು ಜನರನ್ನು ನಾಮ ನಿರ್ದೇಶನ ಮಾಡಲಾಗಿದೆ.

ಇ) ಇಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಕನ್ನಡದಲ್ಲೇ ನಾನು ಕೇಳುತ್ತೇನೆ. ನಾನು ಮೊದಲೇ ಕೇಳಿದ್ದೇನೆ. ಕನ್ನಡದಲ್ಲಿ ''ಕೆ. ಸಿ. ಸಿ. ಬ್ಯಾಂಕ್, ಧಾರವಾಡ ಎಷ್ಟು ಬಂಡವಾಳವನ್ನು ಷೇರು ರೂಪದಲ್ಲಿ ಸಂಗ್ರಹಿಸಿದೆ'' ಎಂದು ಪ್ರಶ್ನೋತ್ತರ ಪಟ್ಟಿಯಲ್ಲಿದೆ. ನಾನು ಕೇಳಿದ್ದು ''ಕೆ. ಸಿ. ಸಿ. ಬ್ಯಾಂಕ್‌ನವರು ಷೇರುಗಳ ರೂಪದಲ್ಲಿ ಪಡೆದ ಬಂಡವಾಳವೆಷ್ಟು'' ಎಂದು ಸರ್ಕಾರದಿಂದ ಪಡೆದ ಬಂಡವಾಳ ಎಷ್ಟು ಎಂದು ಹೇಳಬೇಕು. ನನ್ನ ಎರಡನೇ ಪ್ರಶ್ನೆಗೆ ಉತ್ತರವಾಗಿ, ಸರ್ಕಾರದಿಂದ ನಾಲ್ಕು ಜನರನ್ನು ನಾಮನಿರ್ದೇಶನ ಮಾಡಲಾಗಿದೆ ಎಂದಿದ್ದೀರಿ. ಇದನ್ನು ಯಾವ ಕಾನೂನಿನ ಪ್ರಕಾರ ಮಾಡಿದ್ದೀರಿ ಎಂಬುದನ್ನು ಹೇಳಬೇಕು. ಕೊನೆ ಪ್ರಶ್ನೆ ''ಚುನಾವಣೆಗಳಿಗೋಸ್ಕರವಾಗಿ ಅಂತಹ ನಾಮ ನಿರ್ದೇಶನಗಳನ್ನು ಮಾಡಿರುವುದು ನಿಜವೇ ?'' ಎನ್ನುವ ಪ್ರಶ್ನೆಗೆ ಇಂಗ್ಲೀಷ್‌ನಲ್ಲಿ ಹೌದು ಎಂದು ಕನ್ನಡದಲ್ಲಾದರೆ 'ಇಲ್ಲ' ಎಂದು ಹೇಳುತ್ತೀರಿ. ಸರ್ಕಾರದ ಸದುದ್ದೇಶ ಇದರಿಂದಲೇ ಸ್ಪಷ್ಟವಾಗುತ್ತದೆ. ಚುನಾವಣೆಯ ಸಲುವಾಗಿ ಮಾಡಿಲ್ಲ ಎಂದು ಹೇಳುತ್ತಿದ್ದೀರಿ. ಅಧ್ಯಕ್ಷರೇ, ತಾವೂ ಸಹಕಾರಿ ಸಂಘಗಳಲ್ಲಿ ಕೆಲಸ ಮಾಡಿದವರು. ನಿಮಗೂ ವಿಷಯ ಗೊತ್ತಿದೆ. ಇವತ್ತು ಕೆ. ಸಿ. ಸಿ. ಬ್ಯಾಂಕ್‌ನವರಿಗೆ ಇನ್ನೂ ನೀವು ಷೇರ್ ಹಣವನ್ನು ರಿಲೀಸ್ ಮಾಡಿಲ್ಲ. ಏತಕ್ಕೆ ನೀವು ಷೇರ್ ಸ್ಯಾಕ್ಷನ್ ಮಾಡಿದ್ದೀರಿ ? ಎಲ್ಲಿ ಬೋರ್ಡ್ ರದ್ದು ಆಗುತ್ತದೆಯೋ ಎಂದು ದಗಾಬಾಜಿಯಿಂದ ಇದನ್ನು ಮಾಡಿದೀರಾ ? ನಾಮಕರಣ ಮಾಡುವಾಗ ಷೇರ್ ಹಣವನ್ನು ರಿಲೀಸ್ ಮಾಡಿ. ಸಹಕಾರ ಇಲಾಖೆಯವರು ಆರ್ಡರ್ ಮಾಡಬೇಕು. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ರೊಕ್ಕ ಕೊಟ್ಟಿಲ್ಲ. ನಾಲ್ಕುಮಂದಿ ನಾಮಕರಣವನ್ನು ಮಾಡಿ ಅಧಿಕಾರವನ್ನು ಪಡೆಯುವುದಕ್ಕೆ ಸರ್ಕಾರ ಈ ರೀತಿ ಮಾಡಿದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ.—ಕನ್ನಡದಲ್ಲಿ ಹಾಗೂ ಇಂಗ್ಲೀಷ್‌ನಲ್ಲಿರುವ ಪ್ರಶ್ನೆಗಳು ಹೇಗಿವೆ ಎಂಬುದನ್ನು ವಿಷದೀಕರಿಸುತ್ತೇನೆ. ಇಂಗ್ಲೀಷ್‌ನಲ್ಲಿ ಏನು ಪ್ರಶ್ನೆ ಕೇಳಿದ್ದಾರೆಂದರೆ ಪ್ರಿಂಟ್ ಮಾಡಿರುವುದನ್ನು ನೋಡಿ ಅದರಲ್ಲಿ Whether it is a fact that such nominations were